ಎದೆಗವಚಿಕೊಂಡೇ ಆಸ್ಪತ್ರೆಗೆ ಓಡಿದ್ದಳು. ಖಾಸಗೀ ಆಸ್ಪತ್ರೆ, ಸ್ಪೆಷಲ್ ವಾರ್ಡಿಗೆಲ್ಲ ಸೇರಿಸಲು ದುಡ್ಡೆಲ್ಲಿಯದು. ಹಾಗಾಗಿ ಅರ್ಧ ಪುಕ್ಕಟೆ ಅರ್ಧ ಕಾಸು ತೆರಬೇಕಾದ ಈ ಚಾರಿಟಿ ಆಸ್ಪತ್ರೆಗೆ ಬಂದಿದ್ದಳು. ಅವನೊಂದಿಗೆ ಕಳೆಯಬೇಕಾದ ದಿನಗಳಲ್ಲಿ ಕೆಲಸಕ್ಕೆ ಹೋಗುವ ಹಾಗಿಲ್ಲ. ದಿನದ ಊಟಕ್ಕೆ ದುಡಿದು ತರಬೇಕಿದ್ದವಳ ಊಟಕ್ಕೂ ತತ್ವಾರ. ಹಾಗಿರುವಾಗ ಈ ಆಸ್ಪತ್ರೆಯ ಜನರಲ್ ವಾರ್ಡೇ ಗತಿ.

ಇಲ್ಲಿಗೆ ಬಂದಂದಿನಿಂದ ಮಗನನ್ನು ನೋಡುತ್ತಿದ್ದ ಡ್ಯೂಟಿ ಡಾಕ್ಟರುಗಳು ಹೇಳುತ್ತಲೇ ಇದ್ದಾರೆ. 'ಇದೆಲ್ಲ ಹಣ ಇದ್ದವರಿಗೆ ಬರಬೇಕಾದಂತಹ ಕಾಯಿಲೆ.' ಅಂದರೆ 'ಇದು ಕೈ ಬಿಟ್ಟ ಕೇಸು' ಎನ್ನುವುದನ್ನು ನೇರವಾಗಿ ಹೇಳಲಿಲ್ಲ ಅಷ್ಟೆ.

★★★

ತಾನಾಗಿಯೇ ಆಸೆಯಿಂದ, ಹಟದಿಂದ ಯಾರು ಯಾರಿಗೋ ಸುಳ್ಳು ಹೇಳಿ, ಮೋಸ ಮಾಡಿ ಮದುವೆ ಮಾಡಿಕೊಂಡ ಆ ಗಂಡನೆನಿಸಿಕೊಂಡವ ಮದುವೆಯಾದ ಮೇಲೆ ಮಾಡಿದ ಒಂದೇ ಒಂದು ಕೆಲಸವೆಂದರೆ ಈಕೆಯ ಕೈಗೆ ಒಂದು ಮಗುವನ್ನು ಕೊಟ್ಟಿದ್ದು. ಉಳಿದಂತೆ ನೋವು ಮತ್ತು ಕಹಿ ನೆನಪುಗಳೇ.

ಪ್ರಪಂಚವನ್ನೇ ಗೆದ್ದೆ ಎನ್ನುವ ಹಿಗ್ಗಿನಲ್ಲಿ ಮದುವೆ ಮುಗಿಸಿ ಗಂಡನ ಹಿಂದೆಯೇ ಅವನ ಮನೆಗೆ ಹೋದ ದಿನವೇ ಅವಳ ಭ್ರಮೆಯ ಪರೆ ಕಳಚಿ ಬಿದ್ದಿತ್ತು. ಮದುವೆ ಮನೆಯಲ್ಲಿ ಯಾವತ್ತೂ ಕಾಣಿಸಿಕೊಳ್ಳದ ನಾಲ್ಕು ಮಂದಿ ಬಾಗಿಲಿಗೆ ಬಂದು ಆರತಿಯೆತ್ತಿದ್ದರು. 'ಯಾರಪ್ಪ ಇವರೆಲ್ಲ' ಎಂದು ಆಶ್ಚರ್ಯಪಡುತ್ತಲೇ ಒಳಗೆ ಕಾಲಿಟ್ಟಿದ್ದಳು. ಅಷ್ಟೇ. ಹಾಗೆ ತೆರೆದ ಬಾಯಿ ಮುಚ್ಚಿರಲೇ ಇಲ್ಲ. ಅದೇ ಆರತಿ ಎತ್ತಿದ್ದ ಮಂದಿ ಇವರ ಬೆಡ್ ರೂಮಿಗೂ ಬಂದಿದ್ದರು. ಬಂದವರು ಹೊರಗೆ ಹೋಗಲೇ ಇಲ್ಲ. ಒಬ್ಬರಲ್ಲ ಒಬ್ಬರು ಇದ್ದೇ ಇರುತ್ತಿದ್ದರು. ಇವಳೇ ಹೊರಗಿನವಳು. ಅಪರೂಪಕ್ಕೊಮ್ಮೆ ಅವರಲ್ಲಿ ಯಾರೂ ಇಲ್ಲದ ದಿನ ಅದು ಹದಿನೈದು ದಿನಕ್ಕೋ ತಿಂಗಳಿಗೋ ಒಮ್ಮೆ ಇವಳಿಗೆ ಬೆಡ್ ರೂಮಿಗೆ ಪ್ರವೇಶ. ಉಳಿದಂತೆ ಈಕೆ ಆ ಮನೆಯಲ್ಲಿ ಚಾಕರಿಯವಳು.

ಕಾಲೇಜಿನ ದಿನಗಳಲ್ಲಿ ತರಗತಿಗೆ ಚಕ್ಕರ್ ಹೊಡೆದು ನೋಡುತ್ತಿದ್ದ ಹಿಂದೀ ಸಿನಿಮಾಗಳ ಹೀರೋನಂತೆ ಇದ್ದನೆಂದು ಅವನ ಹಿಂದೆ ಬಿದ್ದು ಹಟ ಹಿಡಿದು ಮದುವೆಯಾದ ಮೇಲೆಯೆ ಒಂದೊಂದಾಗಿ ಅವನ ಬಣ್ಣ ಬಯಲಾದದ್ದು. ಮದುವೆಗೆ ಮುಂಚೆ ಸ್ಟೈಲಾಗಿ ಕುಳಿತುಕೊಂಡು ಬರುತ್ತಿದ್ದ ಬೈಕು ಅವನದ್ದಲ್ಲ. ಅಷ್ಟೇ ಏಕೆ ದಿನಕ್ಕೊಂದು ತೆರನಾಗಿ ಹಾಕಿಕೊಂಡು ಬರುತ್ತಿದ್ದ ಅಂಗಿ ಪ್ಯಾಂಟುಗಳೂ ಲಾಂಡ್ರಿಯವನಿಂದ ಬಾಡಿಗೆಗೆ ತರುತ್ತಿದ್ದುದು. ಅಪ್ಪ ಮಾಡಿಟ್ಟ ಆಸ್ತಿಯ ಮೇಲೆ ಅದೆಲ್ಲವನ್ನು ಮಾರಿದರೂ ತೀರಿಸಲಾಗದಷ್ಟು ಸಾಲ. ಅದಕ್ಕಿಂತ ಹೆಚ್ಚಾಗಿ ಆಕೆಗೆ ಆಘಾತವಾದದ್ದು ಮನೆ ಹೊಗುವಾಗ ಆರತಿಯೆತ್ತಿ ಇವರನ್ನು ಬರಮಾಡಿಕೊಂಡಿದ್ದ ಆ ಹೆಂಗಸರ ಬಗ್ಗೆ ಕೇಳಿದರೆ ಅವನಿತ್ತ ಉತ್ತರ, 'ನಿನ್ನಪ್ಪನ ಮನೆಯಿಂದ ಇಷ್ಟು ದುಡ್ಡು ತರಲು ಸಾಧ್ಯವೇ... ನೋಡು ಅವರು ಪ್ರತಿಯೊಬ್ಬರೂ ಲಕ್ಷ ಲಕ್ಷ ತರುವ ತಾಕತ್ತಿದ್ದವರು'. ಅಪ್ಪನ ಆಸ್ತಿಯನ್ನು ಆಗಲೇ ಮುಗಿಸಿದ್ದವ ಮದುವೆಯಾದ ಆರೇ ತಿಂಗಳುಗಳ ಒಳಗೆ ಬಲವಂತವಾಗಿ ತನ್ನಪ್ಪನ ಆಸ್ತಿಯನ್ನೂ ಪಡೆದುಕೊಂಡು ಗುಳುಂ ಮಾಡಿದ್ದ. ಇನ್ನೆಲ್ಲಿಂದ ಅಪ್ಪನೊಡನೆ ಹಣ. ಹಾಗೆಂದು ಹೇಳಿದರೆ ಹೊಡೆತ.

ಮದುವೆಯಾದ ವರ್ಷದೊಳಗೇ ಆತ ಹಾಸಿಗೆ ಹಿಡಿದಿದ್ದ. ಅದೇನೋ ಕಾಯಿಲೆ ಎಂದರು